International Journal of Kannada Research
www.kannadajournal.com

ISSN: 2454–5813
IJSR 2016; 2(3): 135-138
© 2016 IJKS
www.kannadajournal.com
Received: 17-04-2016
Accepted: 18-05-2016

**ಶ್ರೀ. ಸದಾಶಿವ ಎಸ್. ಮುಗಳಿ.**
ಉಪನ್ಯಾಸಕರು, ಇತಿಹಾಸ ವಿಭಾಗ,
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ (ರಾ.ಚ.ವಿ), ಬೆಳಗಾವಿ.

**Correspondence**
**ಶ್ರೀ. ಸದಾಶಿವ ಎಸ್. ಮುಗಳಿ.**
ಉಪನ್ಯಾಸಕರು, ಇತಿಹಾಸ ವಿಭಾಗ,
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ (ರಾ.ಚ.ವಿ), ಬೆಳಗಾವಿ.

# ಪ್ರಸ್ತುತ ಭಾರತದ ಶಿಕ್ಷಣ ವ್ಯವಸ್ಥೆಯ ಸಮಸ್ಯೆಗಳು.

**ಶ್ರೀ. ಸದಾಶಿವ ಎಸ್. ಮುಗಳಿ.**

**ಸಂಕ್ಷೀಪ್ತ ಸೂಚಿ**
ಶಿಕ್ಷಣ ಎನ್ನುವುದು ಮಾನವ ಸಂಪನ್ಮೂಲ ಅಭಿವೃದ್ಧಿಯ ಮೂಲ ಬಂಡವಾಳ. ಇಂದಿನ ಶಿಕ್ಷಣದ ಮುಖ್ಯ ಉದ್ದೇಶ ಎಲ್ಲ ಮಕ್ಕಳಿಗೆ ಗುಣಮಟ್ಟದ  ಶಿಕ್ಷಣ ದೊರಕಬೇಕು. ಆದರೆ ಇಂದು ಭಾರತದಲ್ಲಿ ಲಭ್ಯವಾಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ದೋಷಗಳು ಕಂಡುಬರುತ್ತಿವೆ. ಮಹಾತ್ಮಾ ಗಾಂಧೀಜಿ ಹೇಳಿರುವಂತೆ "ಶಿಕ್ಷಣದ ಮೊದಲ ಹಂತದ ಕಲಿಕೆಯ ತನು–ಮನಗಳ ಶುದ್ಧೀಕರಣ"ವಾಗಿರಬೇಕು. ಶಿಕ್ಷಣ ಪ್ರತಿಯೊಂದು ಮಗುವಿನ ಹಕ್ಕು ಯಾಕೆಂದರೆ ಬದುಕಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಮಗುವನ್ನೂ ಸಿದ್ಧಗೊಳಿಸುವುದೇ ಶಿಕ್ಷಣ. ಭಾರತದಲ್ಲಿ ಇಂದು ಶಿಕ್ಷಣ ಸಮಾನವಾಗಿಲ್ಲ. ಆಯಾ ರಾಜ್ಯದ ಸಂಸ್ಕೃತಿ, ಭಾಷೆ, ಹಲವು ಆಚಾರ ವಿಚಾರಗಳಿಂದ ಕೂಡಿದ್ದು ವಿಭಿನ್ನವಾಗಿದೆ. ಇದು ಪಾಶ್ಚಾತ್ಯ ಜಗತ್ತಿನ ದೇಶಗಳಿಗೆ ಹೋಲಿಸಿದಾಗ ಅಸಮರ್ಪಕವೆಂದು ಎನಿಸುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಪ್ರತಿ ವರ್ಷ ಶಿಕ್ಷಣಕ್ಕಾಗಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಆ ಹಣಕಾಸಿನ ಹಂಚಿಕೆಯಲ್ಲಿ ವಿಳಂಬ ಮತ್ತು ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ದೇಶದ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣ ಪೂರೈಸಲು ಎಪ್ರಿಲ್ 1, 2010 ರಿಂದ ಕಡ್ಡಾಯ ಶಿಕ್ಷಣವೆಂಬ ಕಾನೂನನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಯಿಂದಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ ದಾಖಲಾತಿ ಏರಿಗೆ ಕಂಡು ಬರುತ್ತಿದೆ. ಆದರೂ ಭಾರತದಲ್ಲಿ ಖಾಸಗಿ ಶಾಲೆಗಳತ್ತ ಪಾಲಕರು  ಮುಖ ಮಾಡುತ್ತಿದ್ದಾರೆ.  ಇಂದು ದೇಶದಲ್ಲಿ ಗುಣಮಟ್ಟದ ವೃತ್ತಿಪರ ಉನ್ನತ ಶಿಕ್ಷಣ ಕ್ಷೇತ್ರಕ್ಕೆ  ಪ್ರಸಕ್ತ ಬಜೆಟ್‌ನಲ್ಲಿ ಕೇಂದ್ರ ಮತ್ತು ಆಯಾ ರಾಜ್ಯಗಳು ಭಾರಿ ಕೊಡುಗೆ ನೀಡುತ್ತಿವೆ. ಭಾರತದಲ್ಲಿ ಹಂಚಿಕೆಯಾಗುವ ಹಣಕಾಸಿನ ಸೌಲಭ್ಯಗಳು ಸಮರ್ಪಕವಾದ ಕ್ರಮದಲ್ಲಿ ಪೂರೈಕೆಯಾಗುತ್ತಿಲ್ಲ. ಹೀಗಾಗಿ ಶಿಕ್ಷಣ ಸಂಸ್ಥೆಗಳು, ಹಣಕಾಸಿನ ಕೊರತೆ ಎದುರಿಸುತ್ತಿವೆ

**ಪ್ರಮುಖ ಪದಗಳು:** ಭಾರತೀಯ ಶಿಕ್ಷಣ ನೀತಿ, ಸಮಸ್ಯೆ, ಸವಾಲುಗಳು, ಉನ್ನತ ಶಿಕ್ಷಣ, ಕಡ್ಡಾಯ ಶಿಕ್ಷಣ, ಖಾಸಗಿ ಶಿಕ್ಷಣ ಸಂಸ್ಥೆಗಳು, ಶಿಕ್ಷಣ ಮತ್ತು ವ್ಯಾಪಾರೀಕರಣ.

## ಪೀಠಿಕೆ

ಶಿಕ್ಷಣ ಎನ್ನುವುದು ಮಾನವ ಸಂಪನ್ಮೂಲ ಅಭಿವೃದ್ಧಿಯ ಮೂಲ ಬಂಡವಾಳ. ಸೂಕ್ತವಾದ ಶಿಕ್ಷಣದ ಮೂಲಕ ಪ್ರತಿ ಮಾನವ ಸಂಪನ್ಮೂಲ ಅಥವಾ ಸಾಮರ್ಥ್ಯ ಅಭಿವೃದ್ಧಿಗೊಂಡು, ಕೌಶಲ್ಯಭರಿತ ವ್ಯಕ್ತಿಯಾಗಿ ಬದುಕು ಸಾಗಿಸಲು ಅನುವು ಮಾಡಿಕೊಡುತ್ತಾ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಬೇಕೆಂದು ಬಹುಜನರ ಆಶಯ. ಈ ಹಿಂದೆ ಶಿಕ್ಷಣ ಸರ್ವರ ಸ್ವತ್ತಾಗದೆ ಕೆಲವರಿಗೆ ಮಾತ್ರ ಮೀಸಲಾಗಿತ್ತು. ಇಂದು ಶಿಕ್ಷಣ ಸಾರ್ವತ್ರೀಕರಣದ ಹಾದಿ ಹಿಡಿದಿರುವುದರಿಂದ ಈ ಕ್ಷೇತ್ರವು ತನ್ನ ಪರಿಸ್ಥಿತಿಗನುಗುಣವಾಗಿ ಬದಲಾವಣೆಗೊಳ್ಳುತ್ತಿದೆ. ಇಂದಿನ ಶಿಕ್ಷಣದ ಮುಖ್ಯ ಉದ್ದೇಶ ಎಲ್ಲ ಮಕ್ಕಳಿಗೆ ಗುಣಮಟ್ಟದ  ಶಿಕ್ಷಣ ದೊರಕಬೇಕು. ಆದರೆ ಇಂದು ಭಾರತದಲ್ಲಿ ಲಭ್ಯವಾಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ದೋಷಗಳು ಕಂಡುಬರುತ್ತಿವೆ. ಪ್ರಸ್ತುತ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ನಿವಾರಿಸುವ ಅವಶ್ಯಕತೆ ಮತ್ತು ಅನಿವಾರ್ಯತೆಯಿದೆ.

**ಸಾರ್ವತ್ರಿಕ ಶಿಕ್ಷಣ**

ಮಹಾತ್ಮಾ ಗಾಂಧೀಜಿ ಹೇಳಿರುವಂತೆ "ಶಿಕ್ಷಣದ ಮೊದಲ ಹಂತದ ಕಲಿಕೆಯ ತನು-ಮನಗಳ ಶುದ್ಧೀಕರಣ"ವಾಗಿರಬೇಕು. ಶಿಕ್ಷಣ ಪ್ರತಿಯೊಂದು ಮಗುವಿನ ಹಕ್ಕು ಯಾಕೆಂದರೆ ಬದುಕಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಮಗುವನ್ನೂ ಸಿದ್ಧಗೊಳಿಸುವುದೇ ಶಿಕ್ಷಣ. ಎಲ್ಲರನ್ನೂ ಒಳಗೊಳ್ಳುವ ಶಿಕ್ಷಣ ಇಂದಿನ ಅವಶ್ಯಕತೆಯಾಗಿದೆ. ನುರಿತ ತಂದೆ ತಾಯಿಗಳನ್ನು, ಪಾಲಕರನ್ನು ಶಿಕ್ಷಕರು ಮುಖ್ಯಸ್ಥರು ಸಹ ಈ ಶಿಕ್ಷಣ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ನರ್ಸರಿ, ಎಲ್.ಕೆ.ಜಿ, ಯು.ಕೆ.ಜಿ.ಯಿಂದ ಪ್ರಾರಂಭವಾಗುವ ಪಾಠದ ಭಾರವನ್ನು ತಗ್ಗಿಸುವ ಕುರಿತು ಚಿಂತನೆ ಚರ್ಚೆ ಆಗಬೇಕಾದದ್ದು ಅವಶ್ಯವಿದೆ. ಪ್ರಾಥಮಿಕ ಹಂತದಿಂದ ಶಿಕ್ಷಣ ಪ್ರಕ್ರಿಯೆಯಲ್ಲಿ ಲಿಂಗ ಮತ್ತು ಸಾಮಾಜಿಕ ಭೇದಗಳನ್ನು ನಿವಾರಿಸುವ ದೃಷ್ಟಿಕೋನ ಬೆಳೆಸಬೇಕಾಗಿದೆ. ದೇಶದ ಮೂಲೆ ಮೂಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ವಿದ್ಯಾರ್ಥಿಗಳಿಗೆ ನಿಯಮಿತ ಒಳ್ಳೆಯ ಉಪಯುಕ್ತಕರ ಸಂಪನ್ಮೂಲಗಳನ್ನು ಒದಗಿಸಬೇಕಿದೆ. ಪಾರಂಪರಿಕ ಪಠ್ಯಕ್ರಮಗಳನ್ನು ಹೊರತುಪಡಿಸಿ, ಇಂದಿನ ಆಧುನಿಕ ಜಗತ್ತಿನೊಂದಿಗೆ ಕೈ ಜೋಡಿಸುವ ಇತರೆ ಸಂಸ್ಥೆಗಳೊಂದಿಗೆ ಒಳಗೊಳ್ಳುವಿಕೆಗೆ ಆದ್ಯತೆ ನೀಡಬೇಕಾಗಿದೆ. ಶೈಕ್ಷಣಿಕ ಹಂತದಲ್ಲಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಸುಸ್ಥಿರಗೊಳಿಸಲು ಪ್ರಯತ್ನಿಸಬೇಕಿದೆ. ಹೀಗಾದಾಗ ಮಾತ್ರ ವಿದ್ಯಾರ್ಥಿಗಳ ಆತ್ಮಹತ್ಯೆ, ದುಶ್ಚಟಗಳಿಗೆ ಬಲಿಯಾಗುವುದನ್ನು ತಪ್ಪಿಸಬಹುದು. ದೇಶದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾದ ಪರಿಸರ ರಕ್ಷಣೆಯ ಕಾಳಜಿಗಾಗಿ ಶಿಕ್ಷಣದ ಮೂಲಕ ಧನಾತ್ಮಕ ಪ್ರಯತ್ನ ಮಾಡುವುದು ಅತೀ ಅವಶ್ಯವಾಗಿದೆ.

ಭಾರತದಲ್ಲಿ ಇಂದು ಶಿಕ್ಷಣ ಸಮಾನವಾಗಿಲ್ಲ. ಆಯಾ ರಾಜ್ಯದ ಸಂಸ್ಕೃತಿ, ಭಾಷೆ, ಹಲವು ಆಚಾರ ವಿಚಾರಗಳಿಂದ ಕೂಡಿದ್ದು ವಿಭಿನ್ನವಾಗಿದೆ. ಇದು ಪಾಶ್ಚಾತ್ಯ ಜಗತ್ತಿನ ದೇಶಗಳಿಗೆ ಹೋಲಿಸಿದಾಗ ಅಸಮರ್ಪಕವೆಂದು ಎನಿಸುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಪ್ರತಿ ವರ್ಷ ಶಿಕ್ಷಣಕ್ಕಾಗಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಆ ಹಣಕಾಸಿನ ಹಂಚಿಕೆಯಲ್ಲಿ ವಿಳಂಬ ಮತ್ತು ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಉಚ್ಚತರ ಶಿಕ್ಷಣ ಅಭಿಯಾನ ಮತ್ತು ಇನ್ನು ಹಲವು ಯೋಜನೆಗಳ ಅಡಿಯಲ್ಲಿ ಉಚಿತವಾಗಿ ಪಠ್ಯಪುಸ್ತಕ, ನೋಟಬುಕ್, ಸಮವಸ್ತ್ರ, ಸೈಕಲ್, ಮಧ್ಯಾಹ್ನದ ಬಿಸಿಯೂಟ, ಶಿಷ್ಯವೇತನ, ಉಚಿತ ವಸತಿ ನಿಲಯ, ಶಿಕ್ಷಣಸಾಲ ಹೀಗೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆಯಾದರೂ ನಮ್ಮ ಶಿಕ್ಷಣದ ಗುಣಮಟ್ಟ ಕೆಳ ಹಂತದಲ್ಲಿರುವುದು ಸ್ಪಷ್ಟವಾಗಿದೆ.

**ಶಿಕ್ಷಣದ ಸಮಸ್ಯೆಗಳು**

- ಪಠ್ಯ ಅರ್ಥ ಮಾಡಿಕೊಳ್ಳದೇ ಓದುವುದು : ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸುಮಾರು ವಿದ್ಯಾರ್ಥಿಗಳಿಗೆ ತಮ್ಮ ಪಠ್ಯಕ್ರಮ ಕುರಿತು ಸರಿಯಾದ ತಿಳುವಳಿಕೆ ಇಲ್ಲದಾಗಿದೆ. ಪಠ್ಯಕ್ರಮ ರಚನಾ ವಿಧಾನ, ಪಠ್ಯಕ್ರಮದ ಹಿನ್ನಲೆ ಅದರ ಅವಶ್ಯಕತೆ, ಅದರಲ್ಲಿರುವ ದೋಷಪುರಿತ ಅಂಶಗಳನ್ನು ಅರ್ಥೈಸಿಕೊಳ್ಳದೇ ಕೇವಲ ಪದವಿಗಾಗಿ ಓದುವ ಸ್ಥಿತಿ ಎದುರಾಗಿದೆ.
- ನಮ್ಮ ಶಿಕ್ಷಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿಲ್ಲ : ವ್ಯಕ್ತಿತ್ವ ವಿಕಸನ ಇಂದಿನ ದಿನಗಳಲ್ಲಿ ಬಹು ಮಹತ್ವ ಪಡೆದುಕೊಳ್ಳುತ್ತಿದೆ. ವ್ಯಕ್ತಿತ್ವ ವಿಕಸನ ಶೈಕ್ಷಣಿಕ ಅರ್ಹತೆಗಿಂತ ಉತ್ತಮವಾದುದು. ಈ ಕ್ಷೇತ್ರವನ್ನು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಪಠ್ಯಕ್ರಮದ ಭಾಗವಾಗಿ ಓದದೇ ಅದು ಇಡೀ ದೇಶದ ಶಿಕ್ಷಣ ಕ್ರಮಕ್ಕೆ ಪೂರಕವಾಗಿರುವಂತಿರಬೇಕು.
- ಕ್ರಿಯಾತ್ಮಕ ಶೈಲಿಯ ತರಬೇತಿ ಪಡೆದ ಶಿಕ್ಷಣ ಕೊರತೆ : ಜಗತ್ತಿನ ಅತೀ ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ನಮ್ಮ ದೇಶದಲ್ಲಿ ಕ್ರಿಯಾತ್ಮಕ ಶೈಲಿಯಲ್ಲಿ ತರಬೇತಿ ಪಡೆದ ಶಿಕ್ಷಕರ ಕೊರತೆ ಎದ್ದು ಕಾಣುತ್ತಿದೆ. ಜಾತಿ ಮತ್ತು ಹಣದ ಬಲದಿಂದಾಗಿ ಪದವಿಗಳು ಸರಳ ದೊರಕುತ್ತಿರುವುದರಿಂದ ನುರಿತ ಶಿಕ್ಷಕರ ಗುಣಮಟ್ಟ ಕೆಳಹಂತದಲ್ಲಿರುವುದು ಕಂಡು ಬರುತ್ತಿದೆ.
- ಪ್ರಸುತ ಉದ್ಯೋಗಾವಕಾಶಗಳಿಗೆ ಪೂರಕವಾಗದ ಪಠ್ಯಕ್ರಮಗಳು: ಇಂದಿನ ಶಿಕ್ಷಣ ವ್ಯವಸ್ಥೆ ಪದವಿದರರನ್ನು ಸೃಷ್ಟಿಸುತ್ತಿದೆ. ಹೊರತು ಇಂದಿನ ಅವಶ್ಯಕ ಉದ್ಯೋಗಗಳಿಗೆ ಪೂರಕವಾಗಿಲ್ಲ. ತಾಂತ್ರಿಕ ಶಿಕ್ಷಣಕ್ಕೆ ಇಂದು ಹೆಚ್ಚು ಮಹತ್ವ ಬಂದಿರುವುದರಿಂದ ಮಾನವಿಕ ವಿಷಯಗಳು ಹಿನ್ನಡೆ ಅನುಭವಿಸುತ್ತಿವೆ.
- ರಚನಾತ್ಮಕ, ಕ್ರಿಯಾಶೀಲ, ಸಂಶೋಧನಾತ್ಮಕ ಕೌಶಲ್ಯಗಳ ಕೊರತೆ : ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ದುರ್ಬಲ ಹಾಗೂ ಶಿಕ್ಷಿತ ವಿದ್ಯಾವಂತರು, ಉನ್ನತ ಶಿಕ್ಷಣ ಪಡೆದರೂ ಔದ್ಯೋಗಿಕ ತರಬೇತಿಯ ಕೊರತೆ ಎದ್ದು ಕಾಣುತ್ತಿದೆ. ಅಧ್ಯಾಪಕರ ಸಾಮರ್ಥ್ಯವನ್ನು ಗಟ್ಟಿಗೊಳಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ಸಂಶೋಧನಾತ್ಮಕ ಕೌಶಲ್ಯಗಳ ಕೊರತೆಯನ್ನು ನಿವಾರಿಸುವುದು ಅತಿ ಅವಶ್ಯ.
- ಸಾಮಾಜಿಕ ಸಾಮರಸ್ಯ, ರಾಷ್ಟ್ರೀಯ ಐಕ್ಯತೆ ಕಾಪಾಡುವಿಕೆಯಲ್ಲಿ ಅಸಹಾಯಕಾರಿ: ನಮ್ಮ ಶಿಕ್ಷಣ ವ್ಯವಸ್ಥೆ ಸಾಮಾಜಿಕ ಸಾಮರಸ್ಯಕ್ಕೆ ಮಾರಕವಾಗಿದೆ. ದೇಶದಲ್ಲಿ ಭ್ರಷ್ಟಾಚಾರ, ಜಾತಿ, ದಂಗೆ, ಮಹಿಳಾ ದೌರ್ಜನ್ಯಗಳು, ಭಯೋತ್ಪಾದನೆ ಮುಂತಾದವುಗಳು ರಾಷ್ಟ್ರೀಯ ಐಕ್ಯತೆ ಕಾಪಾಡುವಲ್ಲಿ ಈ ಶಿಕ್ಷಣ ನೀತಿ ಪೂರಕವಾಗಿಲ್ಲ. ಬದಲಾವಣೆ ಆಗಬೇಕಿದೆ.
- ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಶೀಲತೆ ಒಳಗೊಳ್ಳುವ ಶಿಕ್ಷಣ ಪದ್ಧತಿ ಅವಶ್ಯ : ದೇಶದ ಎಲ್ಲ ಜನರಿಗೆ ಸುಸ್ಥಿರ ಜೀವನೋಪಾಯ ಖಾತರಿಪಡಿಸುವಂತಹ, ಉದ್ಯೋಗ ಸಂಪತ್ತು ಸೃಷ್ಟಿಸುವ, ಅವಿಷ್ಕಾರಪೂರ್ಣ ಉದ್ಯಮಶೀಲತೆ ಆಧಾರಿತ ಕೌಶಲ್ಯಯುಕ್ತ ತರಬೇತಿಯನ್ನೊಳಗೊಂಡ ಪಠ್ಯಕ್ರಮ ಎಲ್ಲ ರಾಜ್ಯಗಳಲ್ಲಿ ಮತ್ತು ಎಲ್ಲ ಪಠ್ಯಕ್ರಮದಲ್ಲಿ ಸೇರಬೇಕು.
- ಕೇವಲ ನೌಕರಿ ಮತ್ತು ಉತ್ತಮ ಸಂಬಳಕ್ಕಾಗಿ ಪದವಿ ಸಂಪಾದನೆ : ಇಂದಿನ ವ್ಯವಹಾರ ಪರಿಸರವು ಕೆಲಸ ಮಾಡುವ ವಿಧದಲ್ಲಿ ಅನೇಕ ಬದಲಾವಣೆಗಳನ್ನು ತರುತ್ತಿದೆ. ಹಾಗಾಗಿ ಕೇವಲ ಒಳ್ಳೆಯ ಸಂಬಳ ದೊರಕುವ ವಿಷಯಗಳನ್ನು ಅನಿವಾರ್ಯವಾಗಿ ಅಧ್ಯಯನ ಮಾಡುವ ಪರಿಸ್ಥಿತಿ ಎದುರಾಗಿದೆ. ಕೇವಲ ಉತ್ತಮ ಶೇಕಡಾವಾರು ಅಂಕಗಳ ಸಂಪಾದನೆಗೆ ಮಾತ್ರ ಅಧ್ಯಯನ ಎಂಬಂತಾಗಿದೆ.

ದೇಶದ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣ ಪೂರೈಸಲು ಎಪ್ರಿಲ್ 1, 2010 ರಿಂದ ಕಡ್ಡಾಯ ಶಿಕ್ಷಣವೆಂಬ ಕಾನೂನನ್ನು ಜಾರಿಗೆ ತರಲಾಗಿದೆ. 6 ರಿಂದ 14 ವರ್ಷ ವಯಸ್ಸಿನ ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ಕ್ರಮಕೈಗೊಳ್ಳಲಾಗಿದೆ. ಈ ಕಾಯ್ದೆಯಿಂದಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ ದಾಖಲಾತಿ ಏರಿಗೆ ಕಂಡು ಬರುತ್ತಿದೆ. ಆದರೂ ಭಾರತದಲ್ಲಿ ಖಾಸಗಿ ಶಾಲೆಗಳತ್ತ ಪಾಲಕರು ಮುಖ ಮಾಡುತ್ತಿದ್ದಾರೆ. ಸರಾಸರಿ 29% ರಷ್ಟು

ವಿದ್ಯಾರ್ಥಿಗಳು ಖಾಸಗಿಯಾಗಿ ಶಿಕ್ಷಣ ಪಡೆಯುತ್ತಿದ್ದಾರೆ ಮತ್ತು 50% ರಷ್ಟು ನಗರದ ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ಸೇರುತ್ತಿದ್ದಾರೆ. 2011 ರ ಪ್ರಕಾರ 82.2% ಪುರುಷ ಮತ್ತು 65.5% ಮಹಿಳೆಯರು ಸಾಕ್ಷರರಾಗಿದ್ದಾರೆ. ಕೇರಳ ರಾಜ್ಯದಲ್ಲಿ 94.65% ರಷ್ಟು ಶಿಕ್ಷಣ ಪ್ರಮಾಣವಿದ್ದರೆ, ಬಿಹಾರದಲ್ಲಿ ಸ್ವಲ್ಪ ಪ್ರಗತಿ ಕಂಡು 63.8% ಕ್ಕೆ ತಲುಪಿರುವುದು ಸಮಾಧಾನಕರ. ಒಟ್ಟು 74.7% ರಲ್ಲಿ 81.1% ರಷ್ಟು, 15 ರಿಂದ 24 ವಯಸ್ಸಿನವರಾಗಿದ್ದಾರೆ. ಭಾರತವು ಯುವಕರನ್ನು ಹೊಂದಿರುವ ರಾಷ್ಟ್ರಗಳಲ್ಲಿ ಮುಂಚುಣಿಯಲ್ಲಿದೆ.

ದೇಶದಲ್ಲಿ ವಿವಿಧ ರೀತಿಯ ಶಿಕ್ಷಣ ಸಂಸ್ಥೆಗಳು ವಿಭಿನ್ನ ಪಠ್ಯಕ್ರಮಗಳನ್ನು ಹೊಂದಿದೆ. ಆಯಾ ರಾಜ್ಯಗಳ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಎನ್.ಸಿ.ಇ.ಆರ್.ಟಿ., ಸಿ.ಬಿ.ಎಸ್.ಇ., ಸಿ.ಆಯ್.ಎಸ್.ಸಿ.ಇ., ಆಯ್.ಸಿ.ಎಸ್.ಇ., ಎ.ಆಯ್.ಸಿ.ಟಿ.ಇ., ಯು.ಜಿ.ಸಿ., ಡಿ.ಸಿ.ಇ., ಎನ್.ಆಯ್.ಓ.ಎಸ್. ಕೇಂದ್ರ ಸರ್ಕಾರಿ ನೌಕರರ ಮಕ್ಕಳಿಗಾಗಿ ಕೇಂದ್ರೀಯ ವಿದ್ಯಾಲಯ, ಜವಾಹರ ನವೋದಯ ವಿದ್ಯಾಲಯ, ಸೈನಿಕ ಶಾಲೆಗಳು, ಕೇಂದ್ರಾಡಳಿತ ಪ್ರದೇಶದ ಶಾಲೆಗಳು, ಆರ್ಮಿ ಪಬ್ಲಿಕ್ ಶಾಲೆಗಳು, ಬುದ್ಧಿಮಾಂದ್ಯ ಮಕ್ಕಳ ಶಾಲೆಗಳು, ಬಾಲಾಪರಾಧಗಳ ಶಾಲೆಗಳು ಮತ್ತು ವಿಕಲಚೇತನರ ಶಾಲೆಗಳು ಇತ್ಯಾದಿ ವಿವಿಧ ಶೈಕ್ಷಣಿಕ ಮಂಡಳಿಗಳು ಮತ್ತು ವಿದ್ಯಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದಾಗಲೂ ಶೈಕ್ಷಣಿಕ ಗುಣಮಟ್ಟ ನಿರೀಕ್ಷೆಗಿಂತ ಕೆಳಮಟ್ಟದಲ್ಲಿದೆ. ಕಾರಣ ರಾಜಕೀಯ ಒಳನುಸುಳುವಿಕೆ ಮತ್ತು ಭ್ರಷ್ಟಾಚಾರ ಅಧಿಕವಾಗಿದೆ.

ಇಂದು ದೇಶದಲ್ಲಿ ಗುಣಮಟ್ಟದ ವೃತ್ತಿಪರ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಪ್ರಸಕ್ತ ಬಜೆಟ್‌ನಲ್ಲಿ ಕೇಂದ್ರ ಮತ್ತು ಆಯಾ ರಾಜ್ಯಗಳು ಭಾರಿ ಕೊಡುಗೆ ನೀಡುತ್ತಿವೆ. ಇಂದು ದೇಶದಲ್ಲಿ ಐ.ಐ.ಎಂ. ಗಳ ಸಂಖ್ಯೆ 20 ಕ್ಕೆ ಮತ್ತು ಐ.ಐ.ಟಿ. ಗಳ ಸಂಖ್ಯೆ 23 ಕ್ಕೇರಿದೆ. ಪ್ರತಿವರ್ಷ ಐ.ಐ.ಟಿ.ಯಲ್ಲಿ ವ್ಯಾಸಂಗ ಮಾಡಲು 10,000 ಕ್ಕೂ ಅಧಿಕ ವಿದ್ಯಾರ್ಥಿಗಳು ದಾಖಲಾಗುತ್ತಾರೆ. ಶೇ 2/3 ನಮ್ಮ ವಿಶ್ವವಿದ್ಯಾಲಯಗಳು ಮತ್ತು 90% ಪದವಿ ಕಾಲೇಜುಗಳು ಶೈಕ್ಷಣಿಕ ಗುಣಮಟ್ಟಕ್ಕಿಂತ ತೀರ ಕೆಳಗಿವೆ. ಉನ್ನತ ವ್ಯಾಸಂಗ ಕೇಂದ್ರಗಳಾದ ವಿಶ್ವವಿದ್ಯಾಲಯಗಳ ನೇಮಕಾತಿಯಲ್ಲಿ ಜಾತಿ ಮತ್ತು ಹಣ ಪ್ರಮುಖ ಪಾತ್ರ ವಹಿಸುತ್ತಿದೆ. ವಿಶ್ವದ ಪ್ರತಿಷ್ಠಿತ ಎರಡನೂರು ವಿಶ್ವವಿದ್ಯಾಲಯಗಳಲ್ಲಿ ಭಾರತದ ಯಾವುದೇ ವಿಶ್ವವಿದ್ಯಾಲಯ ಸ್ಥಾನ ಪಡೆಯದಿರುವುದು ವಿಷಾದಕರ ಸಂಗತಿ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೇಶದ ಸಂಸತ್ತಿನಲ್ಲಿ 15 ಮಸೂದೆಗಳು ಚರ್ಚೆ ಮತ್ತು ಅನುಮೋದನೆಗೆ ಒಳಪಡದೇ ಬಾಕಿಉಳಿದಿವೆ. ಬಹು ಚರ್ಚಿತ ವಿದೇಶಿ ವಿಶ್ವವಿದ್ಯಾಲಯ ಮಸೂದೆ ಚರ್ಚೆಗಳೊಗಾಗಿ ಅಂತಿಮ ಸ್ಪರ್ಷ ಪಡೆಯಬೇಕು.

ಭಾರತದಲ್ಲಿ ಹಂಚಿಕೆಯಾಗುವ ಹಣಕಾಸಿನ ಸೌಲಭ್ಯಗಳು ಸಮರ್ಪಕವಾದ ಕ್ರಮದಲ್ಲಿ ಪೂರೈಕೆಯಾಗುತ್ತಿಲ್ಲ. ಹೀಗಾಗಿ ಶಿಕ್ಷಣ ಸಂಸ್ಥೆಗಳು, ಹಣಕಾಸಿನ ಕೊರತೆ ಎದುರಿಸುತ್ತಿವೆ. ಇದರಿಂದ ಸಮಸ್ಯೆಗಳು ದ್ವಿಗುಣಗೊಳ್ಳುವ ಸಾಧ್ಯತೆಗಳಿವೆ. ದೊರೆತ ಹಣಕಾಸಿನ ಬಳಕೆ ಸರಿಯಾಗಿ ಆಗುತ್ತಿಲ್ಲ. ಜನಸಂಖ್ಯೆಯು ಮಿತಿಮೀರಿ ಬೆಳೆಯುತ್ತಿರುವುದರಿಂದ ಶೈಕ್ಷಣಿಕ ಹಿನ್ನಡೆಯುಂಟಾಗುತ್ತಿದೆ. 2030 ರ ಹೊತ್ತಿಗೆ ಭಾರತದ ಜನಸಂಖ್ಯೆ 153 ಕೋಟಿ ಆಗುವ ನಿರೀಕ್ಷೆಯಿದೆ. ಹೀಗಾಗಿ ಸರಕಾರ ಇಷ್ಟು ಅನಿಯಂತ್ರಿತ ಜನಸಂಖ್ಯೆಗನುಗುಣವಾಗಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಶಿಕ್ಷಕರ ಕೊರತೆ ಎದ್ದು ಕಾಣುತ್ತಿದೆ. ತರಬೇತಿ ಪಡೆದ ಮತ್ತು ನುರಿತ ಕ್ರಿಯಾತ್ಮಕ ಶಿಕ್ಷಕರ ನೇಮಕಾತಿಯಲ್ಲಿ ಹಣ ಮತ್ತು ಜಾತಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಇತ್ತೀಚೆಗೆ ಬಿಹಾರದಲ್ಲಿ ನೇಮಕಗೊಂಡಿದ್ದ ಸಾವಿರಾರು ಶಿಕ್ಷಕರು ಸುಳ್ಳು ದಾಖಲೆಗಳನ್ನು ಹೊಂದಿರುವರೆಂದು ನ್ಯಾಯಾಲಯ ತೀರ್ಪು ನೀಡಿದೆ. ಇದು ನಾಗರಿಕ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಬಡತನ ಮತ್ತು ದಾರಿದ್ರ್ಯ ದೇಶದ ಹಿನ್ನಡೆಗೆ ಮತ್ತೊಂದು ಮುಖ್ಯ ಕಾರಣವಾಗಿದೆ. ಅದೆಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ ಅವರಲ್ಲಿ ಅನೇಕ ಪಾಲಕರು ಶುಲ್ಕ ಕಟ್ಟಲು ಪರದಾಡುತ್ತಾರೆ. ಸರಕಾರಗಳು ಶಾಲೆಯತ್ತ ಮಕ್ಕಳನ್ನು ಆಕರ್ಷಿಸಲು ಮತ್ತು ಮಗು ಶಾಲೆ ತೊರೆಯುವುದನ್ನು ತಪ್ಪಿಸುವ ಉದ್ದೇಶದಿಂದ ಹಾಜರಾತಿ ಭತ್ಯೆ ನೀಡುವ ಯೋಜನೆಯನ್ನು ಜಾರಿಗೆ ತಂದಿವೆ. ಆಡಳಿತ ಮಂಡಳಿ ನಿರುತ್ಸಾಹ ಶೈಕ್ಷಣಿಕ ಪ್ರಗತಿಗೆ ಮಾರಕವಾಗುತ್ತಿದೆ. ರಾಜಕೀಯ ಒಳನುಸುಳುವಿಕೆ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿದೆ. ಇಂದಿನ ಪಾಲಕರಲ್ಲಿ ಒತ್ತಡದ ಜೀವನದಿಂದಾಗಿ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸಲು ಸಮಯ ಸಿಗುತ್ತಿಲ್ಲ. ಪಾಲಕರು ಇಂಗ್ಲೀಷ ಶಾಲೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಪಾಲಕರಿಗೆ 'ಅಂತರಾಷ್ಟ್ರೀಯ ಶಾಲೆ'ಯ ಪರಿಕಲ್ಪನೆ ಸರಿಯಾಗಿ ಅರ್ಥವಾಗುತ್ತಿಲ್ಲ. ಸರಕಾರಗಳಲ್ಲಿ ಸ್ಥಳೀಯ ಭಾಷೆಯ ಬದಲಾಗಿ ಇಂಗ್ಲೀಷ ಭಾಷೆಯ ವ್ಯಾಸಂಗವು ಚರ್ಚಾಸ್ಪದವಾಗಿದೆ. ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಯಲ್ಲಿದ್ದರೆ ಉತ್ತಮ. ಮಗುವಿನ ಬೆಳವಣಿಗೆ ಮೇಲೆ ಅದು ಸಕಾರಾತ್ಮಕ ಪರಿಣಾಮ ಬೀರುತ್ತದೆ. ಭವಿಷ್ಯದ ಉದ್ಯೋಗ ಅವಕಾಶಗಳು ಮತ್ತು ಬೇಡಿಕೆಗೆ ತಕ್ಕಂತೆ ಗುಣಮಟ್ಟದ ಶಿಕ್ಷಣ ಕೌಶಲ ಅಭಿವೃದ್ಧಿ ಮೂಲ ಸೌಕರ್ಯ ಮತ್ತು ಉನ್ನತ ಶಿಕ್ಷಣ ನೀತಿ ರಚಿಸುವ ಅಗತ್ಯವಿದೆ. ಶಿಕ್ಷಣ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಹೊಂದಾಣಿಕೆಯಾಗುವ ವೃತ್ತಿಪರ ಕೋರ್ಸಗಳನ್ನು ಆರಂಭಿಸುವ ಅನಿವಾರ್ಯತೆ ಎದ್ದು ಕಾಣುತ್ತಿದೆ.

## ಉಪಸಂಹಾರ

ಇಂದಿನ ಭಾರತೀಯ ಶಿಕ್ಷಣ ಪದ್ಧತಿ ಸಾಕಷ್ಟು ಬದಲಾಗಬೇಕಿದೆ. ಒಟ್ಟಿನಲ್ಲಿ ಎಲ್ಲರನ್ನು ಒಳಗೊಳ್ಳುವ ಶಿಕ್ಷಣ ಇಂದಿನ ಆಧ್ಯತೆಯಾಗಬೇಕಿದೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸಾರ ಮಾಧ್ಯಮ, ಅಸಂಘಟಿತ ವಲಯ, ಜಾಗತೀಕರಣ, ಆರೋಗ್ಯ, ಪಾರಂಪರಿಕ ಶಾಸ್ತ್ರಗಳು, ಮೂಲ ಸೌಕರ್ಯ, ರಾಷ್ಟ್ರೀಯ ಕೌಶಲ್ಯ ತರಬೇತಿ, ನೈರ್ಮಲ್ಯ, ಪ್ರವಾಸೋದ್ಯಮ ಇತ್ಯಾದಿ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸುವ ಅವಶ್ಯಕತೆಯಿದೆ. ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಭ್ರಷ್ಟಾಚಾರ ಮತ್ತು ಜಾತೀಯತೆಯಿಂದ ಮುಕ್ತಗೊಳಿಸಬೇಕು. ಪ್ರಸ್ತುತ ಜಗತ್ತಿಗೆ ಬೇಕಿರುವ ಪ್ರಜ್ಞಾವಂತ ಯುವಕರ ಆಧ್ಯತೆಗೆ ಅನುಗುಣವಾಗಿ ಶಿಕ್ಷಣ ವ್ಯವಸ್ಥೆಯನ್ನು ಪುನರ್‌ರಚನೆ ಮಾಡಿದ್ದಲ್ಲಿ ನಾಗರಿಕ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಿದಂತಾಗುತ್ತದೆ. ವಿದೇಶಿ ಶಿಕ್ಷಣ ಸಂಸ್ಥೆಗಳಿಗೆ ಭಾರದಲ್ಲಿ ತಮ್ಮ ಕೇಂದ್ರಗಳನ್ನು ತೆರೆಯಲು ಅನುಮತಿ ನೀಡಿದ್ದಲ್ಲಿ ನಮ್ಮ ಶಿಕ್ಷಣದ ಗುಣಮಟ್ಟ ಬದಲಾವಣೆ ಹೊಂದುವ ಸಾಧ್ಯತೆಯಿದೆ. ಒಟ್ಟಿನಲ್ಲಿ ಭಾರತೀಯ ಶಿಕ್ಷಣ ಪದ್ಧತಿಯನ್ನು ಶುದ್ಧಿಕರಿಸುವ ಅವಶ್ಯಕತೆಯಿದೆ.

## ಆಕರ ಗ್ರಂಥಗಳು


1. ಕುಲಕರ್ಣಿ ಕೆ.ಬಿ, ೨೦೦೫, ಶೈಕ್ಷಣಿಕ ನಿರ್ವಹಣೆ, ಗದಗ.
2. ಪವನ ಅಗರವಾಲ್, ೨೦೦೯, ಇಂಡಿಯನ್ ಹೈಯರ್ ಎಜ್ಯುಕೇಶನ್, ನವದೆಹಲಿ.
3. ಪವನ ಅಗರವಾಲ್, ೨೦೧೫, ಎ ಹಾಲ್ಪ್ ಸೆಂಚುರಿ ಆಫ್ ಇಂಡಿಯನ್ ಹೈಯರ್ ಎಜ್ಯುಕೇಶನ್, ನವದೆಹಲಿ.
4. ಪನಿಕ್ಕರ್ ಕೆ.ಎನ್, ೨೦೦೫, ಗ್ಲೋಬಲೈಜೇಶನ್ ಆ್ಯಂಡ್

ಹೈಯರ್ ಎಜ್ಯುಕೇಶನ್ ಇನ್ ಇಂಡಿಯಾ, ನವದೆಹಲಿ.

5. ಯು.ಜಿ.ಸಿ. ವಾರ್ಷಿಕ ವರದಿಗಳು.
6. ಯೋಜನಾ ಕನ್ನಡ ಮತ್ತು ಇಂಗ್ಲೀಷ ಮಾಸ ಪತ್ರಿಕೆಗಳು.
7. ಲಿಯಾ ಲೆವಿನ್, ೨೦೦೦, ಮಾನವ ಹಕ್ಕುಗಳು, ನವದೆಹಲಿ.
8. ಸುಭಾಷ ಆರ್ಯ, ೨೦೦೯, ಮಕ್ಕಳು ಮತ್ತು ಆರೈಕೆ, ಎನ್.ಬಿ.ಟಿ. ನವದೆಹಲಿ.
9. ಹೊಳೆಯಣ್ಣವರ, ೨೦೦೭, ಪಠ್ಯಕ್ರಮ ಹಾಗೂ ಮೌಲ್ಯಮಾಪನ, ಗದಗ.
10. www.ugc.org., www.highereducation.co.in.